ಪಂ-525.-
T.P-2

Reg No B G 155 12—8—72

55th Year of Publication 'Satyavadi' daily, Mysore 4

In the State — The First
Golden Jubilee Celebrated Paper
★
News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವಾತಂತ್ರ್ಯ
ಮಹೋತ್ಸವ
ಸಂದರ್ಭೀಕರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ವೀಬಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೂರು ತಿಂಗಳಿಗೆ ಆಗುವಷ್ಟು ದೇಶದಲ್ಲಿ ಅಕ್ಕಿ ದಾಸ್ತಾನು

ಇಂಗ್ಲೀಷರವನ ಪ್ರತಿಮೆ ತೆಗೆಯಲು

ಮೈಸೂರು— ಜಿಲ್ಲಾ ಕಚೇರಿ ಮುಂದಿರುವ ಇಂಗ್ಲೀಷರವನ ಪ್ರತಿಮೆಯನ್ನು ತಾ। 12 ರೊಳಗೆ ತೆಗೆದು ಅಲ್ಲಿ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಸಂಗಳ್ಳಿ ರಾಯಣ್ಣನ ಪ್ರತಿಮೆ ಇಡಬೇಕೆಂದೂ ತಪ್ಪಿದರೆ ಪ್ರತಿಮೆಯನ್ನು ತಾವೇ ಒಡೆದುಹಾಕುವುದಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕನ್ನಡ ಚಳವಳಿಗಾರರು ಒತ್ತಾಯ ಮಾಡಿದ್ದಾರೆ.

○

ಅವಿಶ್ವಾಸ

ಮದರಾಸು — ಡಿಎಂಕೆ ಮಂತ್ರಿಮಂಡಲದ ಮೇಲೆ ಸ್ವತಂತ್ರಪಾರ್ಟಿ ಕೊಟ್ಟ ಅವಿಶ್ವಾಸ ಸೂಚನೆಗೆ ಶಾಸನಸಭೆಯಲ್ಲಿ ಪ್ರವೇಶ ಸಿಕ್ಕಿತು.

★

ಗಾಡಿ ತುಂಬಾ ಸಕ್ಕರೆ

ಬಿಜಾಪುರ— ಒಂದು ಗಾಡಿ ತುಂಬಾ ಸಕ್ಕರೆಯನ್ನು ಕೆರೂರಿನ ಆಚೆ ಕಾಳಸಂತೆಗೆ ಕಳುಹಿಸುತ್ತಿದ್ದ ಕೆರೂರಿನ ಮಹಾಲಕ್ಷ್ಮಿ ಸಹಕಾರ ಸಂಘದ ಮೇಲೆ ಪೋಲೀಸರು ಸೂಪರಿಂಟೆಂಡೆಂಟ್ರು ಕ್ರಮ ಕೈಗೊಂಡಿದಾರೆ.

ರೇಷ್ಮೆ ತರುಲ್ಲ

ನವದೆಹಲಿ — ದೇಶದಲ್ಲಿ ಅನಾವೃಷ್ಟಿ ಸ್ಥಿತಿ ಇದ್ದರೂ ರೇಷ್ಮೆ ತರುವ ಮತ್ತು ಆಹಾರಧಾನ್ಯ ಆಮದು ಮಾಡಿಕೊಳ್ಳುವ ವಿಷಯ ವಿಲ್ಲವೆಂದೂ, ಆದರೆ ಪರಿಸ್ಥಿತಿ ಕೈಮೀರಿಗೊಂಡರೆ, ಸರಕಾರವು ದೇಶದಾದ್ಯಂತ ಉಳ್ಳಿಕಾಯಿಗಳನ್ನು ಹಿಡಿಯಲು ಹಿಂತೆಗೆಯುವುದಿಲ್ಲವೆಂದೂ ಭಾರತದ ವ್ಯವಸಾಯ ಮಂತ್ರಿ ಶ್ರೀ ಫಕ್ರುದ್ದಿ ಅಹಮದ್ ಹೇಳಿರುವರು — ಈಗ ದೇಶದಲ್ಲಿ 3 ತಿಂಗಳಿಗಾಗುವಷ್ಟು ಅಕ್ಕಿ ಇರುವ ದೆನ್ನಲಾಗಿದೆ.

ವಿಶ್ವಸಂಸ್ಥೆಯಲ್ಲಿ ಸ್ಥಾನ

ಡಾಕಾ— ವಿಶ್ವ ಸಂಸ್ಥೆಯಲ್ಲಿ ಸ್ಥಾನಕ್ಕೆ ಬಂಗ್ಲಾದೇಶ ಹಾಕಿರುವ ಅರ್ಜಿಗೆ 86 ದೇಶಗಳು ಬೆಂಬಲ ನೀಡಿವೆ.

★

ದಿವ್ಯವಾಣಿ

ದೋಷವಿರುವ ವಜ್ರವು, ದೋಷವಿಲ್ಲದ ಹರಳಿಗಿಂತ ಉತ್ತಮ.

— ಕಾನ್ಫ್ಯೂಷಿಯಸ್

ರಾಜ್ಯದಲ್ಲಿ ಸಾಕಷ್ಟು ಆಹಾರವಿದೆ

ಬೆಂಗಳೂರು— ರಾಜ್ಯದಲ್ಲಿ ಸಾಕಾದಷ್ಟು ಆಹಾರವಿರುವುದೆಂದೂ, ರಾಜ್ಯದಲ್ಲಿನ ಅನಾವೃಷ್ಟಿ ಭಾಗದಲ್ಲಿ ಈ ಸಮಸ್ಯೆ ಇಲ್ಲವೆಂದೂ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರು ಹೇಳಿದರು

ನಿಧನ

"ಸತ್ಯವಾದಿ" ಸಂಪಾದಕರಾದ ಶ್ರೀ ಎಂ. ಎಸ್. ಕೃಷ್ಣರಾವ್ ಅವರ ಮಗಳು ಮತ್ತು ಬೆಂಗಳೂರು ಮಲ್ಲೇಶ್ವರಂ ಕಾಫಿ ವರ್ಕ್ಸ್ ಮಾಲೀಕರಾದ ಶ್ರೀ ಎ ಸುಬ್ಬರಾವ್ ಅವರ ಧರ್ಮಪತ್ನಿಯವರು ಆದ ಶ್ರೀಮತಿ ಕಮಲಾಕ್ಷಮ್ಮನವರು ಈ ತಿಂಗಳು 7 ರ ರಾತ್ರಿ 8 ವರಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪೋಲೀಸುಸ್ಯಾದೆ ದಸ್ತಗಿರಿ

ದಾವಣಗೆರೆ —ಹರ್ಸನಹಳ್ಳಿ ತಾಲ್ಲೂಕಿನ ತನ್ನ ಹಳ್ಳಿಯಿಂದ ಬಂದ ಒಬ್ಬ ಲಂಬಾಣಿ ಹುಡುಗಿಯ ಮೇಲೆ ಮಾನಭಂಗ ಅತ್ಯಾಚಾರ ನಡೆಸಿದ ಪೋಲೀಸುಸ್ಯಾದೆಯನ್ನು ದಸ್ತಗಿರಿ ಮಾಡಲಾಗಿದೆ.

ಗಡಿ ವಿವಾದ

ನವದೆಹಲಿ— ಮಹಾರಾಷ್ಟ್ರ-ಮೈಸೂರು ಗಡಿ ವ್ಯಾಜ್ಯದ ತೀರ್ಮಾನವನ್ನು ಪ್ರಧಾನಿಯವರಿಗೆ ಪೂರ್ಣವಾಗಿ ಆ ರಾಜ್ಯಗಳ ಮುಖ್ಯ ಮಂತ್ರಿಗಳು ಬಿಟ್ಟಿಲ್ಲವೆಂದು ಲೋಕಸಭೆಯಲ್ಲಿ ಭಾರತದ ಉಪ ಗೃಹ ಸಚಿವರು ಹೇಳಿದರು

ವಿದ್ಯಾರ್ಥಿಗಳು ಸ್ಥಾಪಿಸಿದ ಕಾಲೇಜು

ತಿರುವೆಂದ್ರಂ —ವಿದ್ಯಾರ್ಥಿಗಳ ಆಡಳಿತದ ಪ್ರಥಮ ಕಾಲೇಜನ್ನು ಗೃಹಮಂತ್ರಿ ಶ್ರೀ ಕರುಣಾಕರ ಉದ್ಘಾಟಿಸಿದರು

ಭುಟ್ಟೋ ಹತ

ರಾವಲ್ಪಿಂಡಿ— ಬಂಗ್ಲಾದೇಶಕ್ಕೆ ಪಾಕಿಸ್ತಾನ ಮನ್ನಣೆ ಕೊಡುವುದು ಸಾಧ್ಯವಿಲ್ಲವೆಂದೂ, ಅದು ವಿಶ್ವಸಂಸ್ಥೆಗೆ ಸೇರುವುದನ್ನು ಚೀನಾ ಅಡ್ಡಿಪಡಿಸುವುದೆಂದೂ ಭುಟ್ಟೋ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು — ತಾವು ಬಂಗ್ಲಾದೇಶದ ಪ್ರಧಾನಿ ಮುಜಿಬರೊಡನೆ ಮಾತುಕತೆ ನಡೆಸಬೇಕೆಂದ್ದಿದ್ದ ಪ್ರಯತ್ನ ವಿಫಲಗೊಂಡಿತೆಂದೂ ಹೇಳಿದರು

ಮರಣದಂಡನೆಯಲ್ಲಿ ದಯೆತೋರಿಕೆ

ನವದೆಹಲಿ— ಗಾಂಧಿ ಶತಮಾನೋತ್ಸವ ಕಾಲದಲ್ಲಿ ಮಾಡಿದ್ದಂತೆ, ಸ್ವಾತಂತ್ರ್ಯ ರಜತೋತ್ಸವ ಸಂದರ್ಭದಲ್ಲೂ, ಮರಣದಂಡನೆಗೆ ಗುರಿಯಾಗಿರುವವರಿಗೆ ದಯೆತೋರಲು ಭಾರತ ಸರ್ಕಾರ ನಿರ್ಧರಿಸಿದೆ — ಈ ಬಗ್ಗೆ ಸೂಚನೆಯನ್ನು ರಾಜ್ಯ ಸರಕಾರಗಳಿಗೆ ಕಳುಹಿಸಲ್ಪಡಲಾಗುವುದು.

★

ದೇವರು ಕೊಟ್ಟ ತೆಳುಪಳಕೆ

ಕಂಪಾ — ಯುಗಾಂಡಾದಿಂದ ಎಲ್ಲಾ ಬ್ರಿಟಿಷ್ ಏಷ್ಯನ್ನೆರನ್ನು ಹೊರದೂಡುವದು ಖಂಡಿತವೆಂದೂ, ಹಾಗೆ ಮಾಡುವಂತೆ ತಮಗೆ ದೇವರು ತಿಳಿಸಿರುವನೆಂದೂ ಅಧ್ಯಕ್ಷ ಇಡಿ ಅಮಿನ್ ಹೇಳಿರುವರು.

★

ಮೂಲಭೂತ ಹಕ್ಕು

ನವದೆಹಲಿ— ರಾಜ್ಯಾಂಗದಲ್ಲಿ ಕೊಟ್ಟಿರುವ ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಮಾಡುವ ಹಕ್ಕಿನ ವಿಷಯದಲ್ಲಿ ಈಚೆಗೆ ಆದ ರಾಜ್ಯಾಂಗ ತಿದ್ದುಪಡಿ ಬಗ್ಗೆ ವಿಮರ್ಶೆಗೆ ಕೇರಳ ಉಚ್ಚನ್ಯಾಯಾಧಿಪತಿಗಳೊಬ್ಬ ಹಾಕಿರುವ ಅರ್ಜಿ ವಿಚಾರಣೆಯು ಸುಪ್ರೀಂ ಕೋರ್ಟಿನಲ್ಲಿ 11 ಜಡ್ಜರ ಮುಂದೆ ಅಕ್ಟೋಬರ್ 23 ರಲ್ಲಿ ಪ್ರಾರಂಭವಾಗುವುದು.

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾತ್ಪರ 4 ಗಂಟೆಗೆ
ಹೊಟೇಲ್ ಬಿಲಾಲ್ನ್ನು
ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಿದರು
ಮಹಾಜನರ ಪ್ರೋತ್ಸಾಹ ಕೋರಿದೆ
ಎಂ. ಅಬ್ದುಲ್ ರಜಾಕ್, ಮಾಲೀಕರು

ಸೀರೆ ಮತ್ತು ಸ್ವೆಟರುಗಳ ಕಾಣಿಕೆ

ಬೆಳಗಾಂ— ಖಾಸಬಾಗು ಮತ್ತು ವಡಗಾಂವದ ನೇಕಾರರು ಸುಮಾರು 200 ಸೀರೆಗಳನ್ನೂ, ಪಹಪ್ಪೂರದ ಹೋಸಿಯರಿ ಯೂನಿಟ್ಟಿನವರು ಸಮಾರು 160 ಸ್ವೆಟರುಗಳನ್ನೂ ಮಲಪ್ರಭಾ ಯೋಜನೆಯಲ್ಲಿ ಪೀಡಿತರಾದ ಬಡ ಜನರಿಗೆ ಹಂಚುವದಕ್ಕೆ ಕಾಣಿಕೆಯಾಗಿ ಕೊಟ್ಟಿದು, ಅವುಗಳನ್ನು ಜಿಲ್ಲಾಧಿಕಾರಿಗಳು ಸದರಿ ಬಡಜನರಿಗೆ ಹಂಚಿರುವರೆಂದೂ ಪ್ರಕಟವಾಗಿದೆ.

★

ಒಪ್ಪಂದ ಭಂಗಕ್ಕೆ ಪರಿಹಾರ

ವಾಷಿಂಗ್ಟನ್— ಭಾರತಕ್ಕೆ ಕೊಟ್ಟ ವಿದೇಶಿ ನೆರವು ಸಾಲದ ಬಗ್ಗೆ ಸುಳ್ಳುಹಕ್ಕು ಮತ್ತು ಒಪ್ಪಂದ ಭಂಗಕ್ಕಾಗಿ ಸಿಪ್ಲ್ಲಾ ಕೈಗಾರಿಕೆಗಳ ಸಂಸ್ಥೆ ಮೇಲೆ ಹಾಕಲಾಗಿದ್ದ ದಾವಾ ಬಗ್ಗೆ ನ್ಯಾಯಾಂಗ ಇಲಾಖೆಯು ಅವರ ವ್ಯವಸ್ಥೆಗೆ ಸಂಸ್ಥೆಯಿಂದ 3 ಮಿಲಿಯ ಡಾಲರುಗಳನ್ನು (ರೂ 2 25 ಕೋಟಿ) ತೆಗೆದುಕೊಳ್ಳಲು ಒಪ್ಪಿದೆ.

★

ಶ್ರೀ ಕೃಷ್ಣ ಜಯಂತಿ ಸಮಾರಂಭ

ಮೈಸೂರು— ಕೃಷ್ಣರಾಜ ಮೊಹಲ್ಲಾ ಸೊಪ್ಪಿನಕೊಳದ ಬೀದಿಯಲ್ಲಿರುವ ಶ್ರೀ ಡೈವಿಕ ಆಶ್ರಮದಲ್ಲಿ ಶ್ರೀ ಕೃಷ್ಣ ಜಯಂತಿ ಸಮಾರಂಭವು ತಾ ॥ 31-8-72 ರಿಂದ 4-9-72 ರವರೆಗೆ ನಡೆಯುವುದು

Quality Printing Neat Binding

Lakshminarasimha Press

Sivarampet, Mysore

S H A K T I

S U D H A

A Superb Tonic

Help The Gorakshana

— Humanitarian Propoganda Monthly ....

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

ವುಡ್‌ಲ್ಯಾಂಡ್ 100 ನೇ ಸುದಿನ

.... ಚಿತ್ರಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್, ಪಂಡರಿಬಾಯಿ

ನಿರ್ದೇಶನ : ರಾಜಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30

ಮಂತ್ರಾಲಯ ಮಹಾತ್ಮೆ ಅಥವಾ ರಾಘವೇಂದ್ರ ವಿಜಯ

ಅಪೆರಾ 11 8 72ರಿಂದ

— ಆತ್ಯಮೋಘ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪಾತ್ರ— ರಾಜ್‌ಕುಮಾರ್, ಹೇಮಾವಯಲಿನಿ, ರಾಖಿ, ವಿನೋದ್ ಮೆಹ್ರಾ

ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ '

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ಕವರ ಚೊಚ್ಚಲು ಚಿತ್ರ

ಆನೆ - ಹುಡುಗ



Protect the Cow

Contribute Liberally to the National Defence Fund